QUESTIONS FOR ANSWERS ON THE DAY

(but not taken up)

Appeal petitions regarding Seniority of Officials of Bellary District pending in R. D.

188. Sri M. DODDANAGOUD (Sirguppa).—

Will the Minister for Revenue be pleased to state :—

(*a*) whether there are any appeal petitions of officials of Bellary District pending at Government level questioning the seniority of I Dn. Clearks in Bellary District ;

(*b*) if so, the number of applications pending and since what date ;

(*c*) the reasons for delay on the part of the Government in disposing of the appeal petitions ?

Sri H. V. KOUJALGI (Minister for Revenue).—

(*a*) Nil.

(*b*) Does not arise in view of reply to clause (*a*).

(*c*) Does not arise.

Requests to allow discussion on the Repors of the Fifth Finance Commission

†ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಅಧ್ಯಕ್ಷರೆ, ನಾನು ತಮ್ಮ ಗಮನಕ್ಕೆ ಒಂದು ಬಹಳ ಪ್ರಾಮುಖ್ಯವಾದ ವಿಷಯವನ್ನು ತರಬೇಕಾಗಿದೆ. ಅದೇನೆಂದರೆ ಕೇಂದ್ರದ ಐದನೇ ಹಣಕಾಸಿನ ಆಯೋಗದವರು ಕೊಟ್ಟಿರತಕ್ಕ ಒಂದು ವರದಿಯಿಂದ ನಮ್ಮ ರಾಜ್ಯದ ಅಭಿವೃದ್ಧಿಗೆ ಬಹಳ ಧಕ್ಕೆ ಬರುವಹಾಗೆ ನಮಗೆ ಕಂಡುಬರುತ್ತಿದೆ. ಈಗಾಗಲೇ ಸುಮಾರು 50 ಜನರು ಒಂದು ಸಹಿಸಂಗ್ರಹಣೆಮಾಡಿ ಕಾವೇರಿಜಲಾಶಯದ ಪ್ರದೇಶದಲ್ಲಿ ಕೂಡಲೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕೆಂದು ಸರ್ಕಾರದವರನ್ನು ಒತ್ತಾಯಮಾಡಲು ನಿರ್ಣಯವನ್ನು ಕಳುಹಿಸುವುದರಲ್ಲಿದ್ದಾರೆ. ಅದಕ್ಕೆ ಸಾಕಷ್ಟು ಹಣವಿಲ್ಲದಿದ್ದರೆ ರಾಜ್ಯದ ಅಭಿವೃದ್ಧಿಗೆ ಬಹಳ ಕುಂದಕವುಂಟಾಗುತ್ತದೆಂಬ ಭಯ ರಾಜ್ಯದ ಪ್ರಜೆಗಳಲ್ಲಿ ಮೂಡಿರುತ್ತದೆ. ಈ ದಿವಸ ಇಂಥ ಒಂದು ಸಮಸ್ಯೆ ಐದನೆಯ ಹಣಕಾಸಿನ ಆಯೋಗದವರ ವರದಿಯಿಂದ ಉದ್ಭವವಾಗಿದೆ. ಅವರು ಇಂಥ ಒಂದು ವರದಿಯನ್ನು ಮಾಡುವುದಕ್ಕೆ ಯಾರು ಕಾರಣರು. ಯಾರು ಇದಕ್ಕೆ ಜವಾಬ್ದಾರರು ಎಂಬುದನ್ನೆಲ್ಲಾ ಈ ಮಾನ್ಯ ಸಭೆಯವರು ಜರೂರಾಗಿ ಚರ್ಚೆಮಾಡತಕದ್ದು ಅತ್ಯಗತ್ಯ. ನಮ್ಮ ರಾಜ್ಯದ ಆರ್ಥಿಕಮಟ್ಟ ಎಲ್ಲಿಗೆ ನಿಲ್ಲುತ್ತದೆ ಎಂಬುದನ್ನು ತಿಳಿಯಲು ನಮಗೆ ಬಹಳ ಆಸಕ್ತಿ ಉಂಟಾಗಿದೆ. ರಾಜ್ಯದಲ್ಲಿ ಇಂಥ ಒಂದು ಜರೂರಾದ ಪರಿಸ್ಥಿತಿಯುಂಟಾಗಿರುವುದರಿಂದ ಅಧ್ಯಕ್ಷರು ಶೀಘ್ರವಾಗಿ ತತ್ಸಂಬಂಧದಲ್ಲಿ ಒಂದು ಚರ್ಚೆಯನ್ನು ಮಾಡುವುದಕ್ಕೆ ಅವಕಾಶಮಾಡಿಕೊಡಬೇಕೆಂದು ಇದರಿಂದ ರಾಜ್ಯದ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳಬಹುದೆಂದು ನನಗೆ ಅನಿಸುತ್ತಿರುವುದರಿಂದ ಅಧ್ಯಕ್ಷರು ಚರ್ಚೆಗೆ ಅವಕಾಶಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Sri K. PUTTASWAMY (Minister for Law, Labour and Parliamentary Affairs).—Perhaps the hon. Leader of Opposition always wants to take us by surprise by bringing in such matters without previous intimation. I wish he had discussed this matter with me outside the House and then we would have been able to come to some understanding and we would not have also given the trouble to the hon. Chair or take the time of the House. Sir, yesterday or the day before, the Finance Minister made it clear that the Government has not yet received the report of the Finance Commission. In the light of his statement, I would like to ask whether any useful purpose would be served by trying to have discussion based on a report which is not before the House. Any way, we could discuss the matter in consultation with the Finance Minister.

Mr. SPEAKER.—I think the importance of the subject matter cannot be over-emphasized and I think it should come up for debate as a result of agreement between all the parties. It is better that hon. Leaders and whips of both the Ruling party and opposition party meet together and decide before raising it on the floor of this House. I shall also be very much willing to provide an opportunity if it is possible. But in the absence of the report of the Finance Commission and without knowing the reasons for which the Finance Commission has not given a due share to the State to which it is entitled, it may not be useful to have a debate on it.

Sri H. SIDDAVEERAPPA.—Sir, if the Finance Minister had waited till the Report of the Finance Commison is received before making a statement here it would have been better. Supposing the Report is not received before this House adjourns, are we to wait for three months ?

Mr. SPEAKER.—I request the Leaders on both the sides may confer and come to some understanding, After all, hon. Members are concerned with State's interest.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಯೂರುದುರ್ಗ).—ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀ ಮಾನ್ ಶಿವಪ್ಪನವರು ಮೆತ್ತೆ ಕಾವೇರಿ ನೀರಿನ ನಿರ್ಣಯದ ಬಗ್ಗೆ ವಿಚಾರವನ್ನು ಈ ಸಭೆಯ ಗಮನಕ್ಕೆ ತಂದರು. ಪೊನ್ನೆ ಇದಕ್ಕಾಗಿ ರಚನೆಯಾಗಿರತಕ್ಕ ಟೆಕ್ನಿಕಲ್ ಡೇಟಾ ಕಮಿಟಿ ಮತ್ತು ರಿಸೋರ್ಸಸ್ ಕಮಿಟಿ ತೀರ್ಮಾನಗಳು ಬಂದಮೇಲೆ ಅದನ್ನು ಚರ್ಚೆಗೆ ತೆಗೆದುಕೊಳ್ಳುವುದು ಒಳ್ಳೆಯದೆಂದು ಹೇಳಿದಿರಿ. ನಿನ್ನೆ ಟೆಕ್ನಿಕಲ್ ಡೇಟಾ ಕಮಿಟಿ ನಿರ್ಣಯವಾಗಿದೆ, ರಿಸೋರ್ಸಸ್ ಕಮಿಟಿಯವರು ಕಡೆಯ ತೀರ್ಮಾನವನ್ನು ಈ ಅಧಿವೇಶನ ಮುಗಿಯುವುದರೊಳಗೆ ತೆಗೆದುಕೊಳ್ಳುವ ಸಂಭವವಿಲ್ಲವೆಂದು ಗೊತ್ತಾಗುತ್ತದೆ. ಈಗ ಒಂದು ಕಡೆ ಫೈನಾನ್ಸ್ ಕಮಿಷನ್ ಅವರಿಂದ ಸಹಾಯ ಸಿಗುವುದಿಲ್ಲವೆಂದು ಹೇಳುತ್ತೀರಿ. 1974ನೇ ಇಸವಿ ಬಹಳ ಆತುರಾತುರವಾಗಿ ಬರುತ್ತಾ ಇದೆ. ಈಗ ಟೆಕ್ನಿಕಲ್ ಡೇಟಾ ಕಮಿಟಿಯಲ್ಲಿ ಕಾವೇರಿಗೆ ಸಂಬಂಧ ಪಟ್ಟಹಾಗೆ ನೀರಾವರಿ ಕಾಮಗಾರಿಗಳು 1974 ರೊಳಗೆ ಆಖೈರು ಆಗಬೇಕೆಂಬುದಾಗಿ ನಿರ್ದಿಷ್ಟ ಸಲಹೆ ಇರುವುದರಿಂದ ಈ ವಿಷಯವನ್ನು ಚರ್ಚೆ ಮಾಡುವುದು ಬಹಳ ಅಗತ್ಯವಿದೆಯೆಂದು ನಾನು ಭಾವಿಸುತ್ತೇನೆ.

ಇನ್ನೊಂದು ವಿಷಯ. 1966ನೇ ಇಸವಿ ಏಪ್ರಿಲ್ 7 ಮತ್ತು 8ನೇ ತಾರೀಖುಗಳಲ್ಲಿ ಇದೇ ತರಹ ನಿರ್ಣಯಗಳು ಬಂದಿವೆ. ಶ್ರೀಮಾನ್ ಎಂ. ಆರ್. ಪಾಟೀಲ್ ಅವರು ಕೃಷ್ಣಾ ನದಿ ನೀರನ್ನು ಉಪಯೋಗಿಸುವ ಬಗ್ಗೆ ಒಂದು ಸ್ಪೆಸರ್ ರಿಜಲ್ಯೂಷನ್ನನ್ನು ತೆಗೆದುಕೊಂಡು ಬಂದು ಅದು ಇ ಚರ್ಚೆಯಾಯಿತು. ಏಪ್ರಿಲ್ 8ನೇ ತಾರೀಖಿನಲ್ಲಿ ಮಾನ್ಯ ಶ್ರೀ ಎಚ್. ಡಿ. ದೇವೇಗೌಡರು, ಇದೆ

ವಿಚಾರವಾಗಿ ಒಂದು ನಿರ್ಣಯವನ್ನು ತಂದಿದ್ದರು. ಈಗಾಗಲೇ ಆ ಚಾರ್ಜ್‌ಗಳಾಗಿ ಮೂರು ವರ್ಷಗಳು ಗತಿಸಿ ಹೋದುವು. ಈ ಮೂರು ವರ್ಷಗಳಮೇಲೆ ಸರ್ಕಾರದವರು ಇದರ ಬಗ್ಗೆ ಒಂದು ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಸಿದ್ಧವಿದ್ದಾರೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳುವುದು ಬಹಳ ಅಗತ್ಯ. ಮ್ಯಾನೂರಿನಲ್ಲಿ ಅರ್ಧ ಭಾಗದ ಜನರಿಗೆ ಈ ನೀರಿನ ಅನುಕೂಲ ಸಿಗದೇ ಹೋದರೆ ಅವರಿಗೆ ಶಾಶ್ವತವಾಗಿ ತೊಂದರೆಯನ್ನು ತಂದಂತಾಗುತ್ತದೆ. ಇದಕ್ಕಾಗಿ ಸರ್ಕಾರದವರು ನಿರ್ದಿಷ್ಟವಾಗಿ ಉತ್ತರವನ್ನು ಏನು ಹೇಳುತ್ತಾರೋ ಅದನ್ನು ತಿಳಿದುಕೊಳ್ಳುವುದು ಆವಶ್ಯಕ. ತಾವು ಅವರಿಗೆ ಅವಕಾಶವನ್ನು ಈಗ ಕಲ್ಪಿಸಿಕೊಡಬೇಕು; ಮುಂದಿನ ವಾರದಲ್ಲಿ ತಾವು ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಹೇಳಿ ನಾನು ತಮ್ಮಲ್ಲಿ ಒಂದು ಸಲಹೆಮಾಡುತ್ತೇನೆ. ತಾವು ರೀಸೆಂಟ್ ಅಕ್ಕರೆನ್ಸ್ ವಿಚಾರ ಹೇಳಬೇಕೆಂದು ಹೇಳಿದ್ದಿರಿ. ಇತ್ತೀಚೆಗೆ ನಡೆದಿರುವಂಥಾದ್ದಕ್ಕಿಂತ ಹೆಚ್ಚಿಗೆ ಇದಕ್ಕೆ ಪ್ರಾಮುಖ್ಯತೆ ಕೊಡಬೇಕೆಂದು ಕೇಳಿದ್ದಕ್ಕೆ ಹಿಂದೆ ಅವಕಾಶವನ್ನು ಒಂದು ಸಾರಿ ಕೊಟ್ಟಿದ್ದಿರಿ. ಅದೇ ರೀತಿಯ ಅವಕಾಶವನ್ನು ಮತ್ತು ಈಗಲೂ ಕಲ್ಪಿಸಿಕೊಡಬೇಕೆಂದು ನಾನು ಒತ್ತಾಯಪೂರ್ವಕವಾಗಿ ತಮ್ಮನ್ನು ಪ್ರಾರ್ಥನೆಮಾಡುತ್ತೇನೆ.

Sri K. PUTTASWAMY.—I have again to say, Sir, that I shall be very happy to discuss this matter consistent with the work we are having before this House.

Mr. SPEAKER.—I have heard both the hon. Member Sri Hutchmasti Gowda and the hon. Minister for Parliamentary Affairs. I would like to bring to their notice that when that notice of motion was given, I pointed out that the matter was not of recent occurrence and further is has also come up before the House in some form or the other. If anything new happens or if it is of recent occurrence like the Report of the Committee on Technical Data or the Resources Committee and if a suitable motion is given notice of I shall certainly consider it. Since the matter is not of recent occurrence and nothing new has happened, I had to disallow it in accordance with rule 148 of the Rules of Procedure. If the matter comes before me in a suitable form, I will certainly consider, and there should be no difficulty in considering it because both sides agreed about it.

Misappropriation in the Sirsi Municipality

† ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್(ಸಿಸಿ).—ಸುಮಾರು ಮೂರು ದಿವಸಗಳ ಹಿಂದೆ ಅತ್ಯಂತ ಪ್ರಾಮುಖ್ಯವಾದ ಮತ್ತು ಜರೂರಾದ ಒಂದು ವಿಚಾರ, ಅಂದರೆ—ಸಿರ್ಸಿ ಮುನಿಸಿಪಾಲಿಟಿಯಲ್ಲಿ 8 ಲಕ್ಷ ರೂಪಾಯಿ ದುರುಪಯೋಗವಾಗಿದೆ. ಆ ಬಗ್ಗೆ ಸರ್ಕಾರದವರು ವಿಜಿಲೆನ್ಸ್ ಕಮಿಶನ್ ಅಕೌಂಟ್ಸ್ ಕಮಿಟಿ ಮಾಡಿದ ವರದಿ ಮೇಲೆ, ಒಂದು ಆರ್ಡರ್ ಮಾಡಿದ್ದಾರೆ. ಡಿವಿಜನಲ್ ಕಮಿಶನರ್ ಕೊಟ್ಟಂತಹ ಆರ್ಡರನ್ನು ಇಂಪ್ಲಿಮೆಂಟ್ ಮಾಡುವ ಮೊದಲೇ ಅಲ್ಲಿರುವ ಆಡ್ಮಿನಿಸ್ಟ್ರೇಟರನ್ನು ವರ್ಗ ಮಾಡಿದ್ದಾರೆ. ಅದರ ಬಗ್ಗೆ ಒಂದು ಕಾಲಿಂಗ್ ಅಟೆನ್‌ಶನ್ ನೋಟೀಸ್ ಕಳಿಸಿದ್ದೆ. ಅದಕ್ಕೆ ತಾವು ಇದುವರೆಗೂ ಏನೂ ವರದಿ ಕಳಿಸಿಲ್ಲ. ಇದು ಅತ್ಯಂತ ಜರೂರಾದ ವಿಷಯ. ಅಲ್ಲಿ ಈ ದುರುಪಯೋಗವನ್ನು ತಡೆಯುವುದಕ್ಕೆ ಈಗ ಅಲ್ಲಿನ ತಾಲ್ಲೂಕು ಕಾಂಗ್ರೆಸ್ಸಿನ ಅಧ್ಯಕ್ಷರು ಬಂದು ಸರ್ಕಾರದವರಲ್ಲಿ ಹೇಳಿ ಅವರನ್ನು ವರ್ಗ ಮಾಡಿಸಿದ್ದಾರೆ. ಅವರು ಕೇವಲ 10 ತಿಂಗಳು ಮಾತ್ರ ಕೆಲಸ ಮಾಡಿದ್ದಾರೆ. ಅವರು ಅಲ್ಲಿ ಚೆನ್ನಾಗಿ ಕೆಲಸ ಮಾಡಿದ್ದಾರೆ. ಸರ್ಕಾರದವರು ಅವರನ್ನು ಅಲ್ಲಿಯೇ ನಿಲ್ಲಿಸಬೇಕು, ಇಲ್ಲದಿದ್ದರೆ, ಬೇರೆ ಒಳ್ಳೆಯವರನ್ನು ಅಲ್ಲಿ ಹಾಕಿ ಆ 8 ಲಕ್ಷ ರೂಪಾಯಿ ದುರುಪಯೋಗವಾಗಿದ್ದರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ. ಅದಕ್ಕೆ ಉತ್ತರ ಕೊಡಬೇಕು.